# <u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.2692/2013
ಸಿಡಬ್ಲ್ಯೂ.4 ಪಿಡಬ್ಲ್ಯೂ3

| | | |
|---|---|---|
| ಸಾಕ್ಷಿಯ ಹೆಸರು | - | ಎಸ್.ಡಿ.ಹೊಸಮನಿ |
| ವಯಸ್ಸು | - | 58 ವರ್ಷ |
| ಉದ್ಯೋಗ | - | ಅಬಕಾರಿ ಉಪನಿರೀಕ್ಷಕರು |
| ವಾಸ | - | ಗೋಕಾಕ |

ದಿನಾಂಕಃ 18-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

2005 ರಿಂದ 2013 ರವರೆಗೆ ಗೋಕಾಕ ಅಬಕಾರಿ ಪೊಲೀಸ ಠಾಣೆಯಲ್ಲಿ ಅಬಕಾರಿ ರಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ದಿಃ 17-12-2012 ರಂದು ಚಾಸಾ- 3 ಹಾಗೂ ಸಿಬ್ಬಂದಿ ಸೇರಿಕೊಂಡು ಚಾಸಾ-5 ಕೂಡಿಕೊಂಡು ನಮ್ಮ ಸರಕಾರಿ ವಾಹನದಲ್ಲಿ ಅಕ್ಕತಂಗೆರಹಾಳ ನೇಸರಗಿ ರಸ್ತೆಯಲ್ಲಿ ಗಸ್ತು ಕಾರ್ಯ ಮಾಡುವ ಸಲುವಾಗಿ ಕರೆದುಕೊಂಡು ಹೋದರು. ಸುಮಾರು 06.00 ಗಂಟೆ ಸಮಯದಲ್ಲಿ ಪಂಜಾನಟ್ಟಿ ಗ್ರಾಮದಲ್ಲಿ ಬಸ ನಿಲ್ದಾನದ ಹತ್ತಿರ ಇಬ್ಬರು ಭರಮಪ್ಪ ಬೊಂಬರಿ ಮತ್ತು ಬಸವಣ್ಣೆಪ್ಪ ಬಾದರವಾಡಿ ಎಂಬುವರು ನಿಂತಿದ್ದರು. ಅವರನ್ನು ಪಂಚರಾಗಲು ಚಾಸಾ-3 ರವರು ಕೇಳಿಕೊಂಡರು. ಅವರು ಒಪ್ಪಿದ ನಂತರ ಸುಮಾರು ರಾತ್ರಿ 08.15 ಗಂಟೆಗೆ ಪಂಜಾನಟ್ಟಿ ಗ್ರಾಮದ ಸರಕಾರ ಶಾಲೆಯ ಹಿಂಬದಿಯಲ್ಲಿ ನಮ್ಮ ಸರಕಾರಿ ವಾಹನವನ್ನು ನಿಲ್ಲಿಸಿ ಅಕ್ಕತಂಗಿರಹಾಳ ನೇಸರಗಿ ಹೋಗುವ ರಸ್ತೆಯ ಮೇಲೆ ದಸ್ತುಕಾರ್ಯ ಮಾಡಲು ಪ್ರಾರಂಭಿಸಿದೇವು. ಸುಮಾರು 08.30 ಗಂಟೆ ಸಮಯಕ್ಕೆ ಅಕ್ಕತಂಗೆರಹಾಳ ರಸ್ತೆಯ ಕಡೆಯಿಂದ ಬೈಕ ಮೇಲೆ ಏನೂ ಹಿಡಿದುಕೊಂಡು ಬರುವಂತೆ ಕಾಣುತ್ತಿತ್ತು ಅವನನ್ನು ತಡೆದು ನಿಲ್ಲಿಸಲು ಪ್ರಯತ್ನಿಸಿದಾಗ ಅವನು ಸಮವಸ್ತ್ರವನ್ನು ಕಂಡು ಜೋರಾಗಿ ಓಡಲು ಪ್ರಯತ್ನಿಸಿದನು. ನಾವು ಹಾಗೂ ಎಲ್ಲ ಸಿಬ್ಬಂದಿಗಳು ಕೂಡಿಕೊಂಡು ಅಡ್ಡಗಟ್ಟಿ ತಡೆದು ನಿಲ್ಲಿಸಿದೆವು. ನೀಲಿ ಬಣ್ಣದ ಸೈಕಲ ಮೋಟರ ಕೆಎ.02-5103 ಪಲ್ಸರ ಬೈಕ ಇತ್ತು. ಅದರ ಮೇಲೆ ತುಂಬಿದ 2 ಗೊಬ್ಬರ ಚೀಲವನ್ನು ಕಟ್ಟಿದ್ದನು. ಅದನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ರಿಯಲವಿಸ್ಕಿ 90 ಒಮ್.ಎಲ್ ಪ್ಲಾಸ್ಟಿಕ ಪ್ಯಾಕೇಟಗಳು ಇದ್ದವು. ಅವುಗಳನ್ನು ಏಣಿಸಿ ನೋಡಲಾಗಿ 406 ಪ್ಯಾಕೇಟಗಳು ಇದ್ದವು.ಅದರಲ್ಲಿ ಇದ್ದ 2 ಪ್ಯಾಕೇಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಅರಿವೆಯಿಂದ ಕಟ್ಟಿ ದಾರದಿಂದ ಸುತ್ತಿ ಅರಗಿನಿಂದ ನಮ್ಮ ಸರಕಾರಿ ಮುದ್ರೆಯನ್ನು ಹಾಕಲಾಯಿತು. ನಂತರ 08.45 ರಿಂದ 09.45 ರವರೆಗೆ ಬ್ಯಾಟರಿ ಬೆಳಕಿನಲ್ಲಿ ಪಂಚನಾಮೆಯನ್ನು ಬರೆದು ಮುಗಿಸಲಾಯಿತು. ನಂತರ ಗಾಡಿ ಮತ್ತು ಮುದ್ದೆ ಮಾಲನ್ನು ತಗೆದುಕೊಂಡು ಕಚೇರಿಗೆ ಬಂದೆವು. ಮುಂದಿನ ತನಿಖೆಯನ್ನು ಚಾಸಾ-3 ರವರು ಕೈಗೊಂಡಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ದಿಃ 17-12-2012 ರಂದು ನಾನು ಕರ್ತವ್ಯ ನಿರತನಾಗಿ ಕಚೇರಿಯಲ್ಲಿ ಇದ್ದೇನು. ಸಂಜೆ 5.00 ಗಂಟೆಗೆ ಕರೆದು ನನಗೆ ಮಾಹಿತಿ ಹೇಳಿದರು. ನನ್ನ ಜೊತೆ ಚಾಸಾ-5 ಸಿಬ್ಬಂದಿ ಇದ್ದರು. ನಾವೆಲ್ಲರೂ ಕೂಡಿ ಹೊರಡುವಾಗ ಸುಮಾರು 05.15 ಗಂಟೆ ಆಯಿತು. ಕಡಬಗಟ್ಟಿ-ಕನಸಗೇರಿ ಮಾರ್ಗವಾಗಿ ಅಕ್ಕತಂಗೆರಹಾಳಗೆ ಹೋದೆವು. ಹೊಸೂರ ಮುಖಾಂತರ ಹೋಗಿ ಬೆಳಗಾವಿ-ಗೋಕಾಕ ಹೈವೇ ರಸ್ತೆಗೆ ಕೂಡಿದೆವು. ಅಲ್ಲಿಂದ ತೆಳಗನಟ್ಟಿ, ಈರನಟ್ಟಿ , ಮದವಾಲ ನಂತರ ಅಕ್ಕತಂಗೆರಹಾಳ ಕ್ರಾಸ ಬರುತ್ತದೆ ಎಂದರೆ ಸರಿ. ಅಕ್ಕತಂಗೆರಹಾಳ ಕ್ರಾಸದಿಂದ ಅಕ್ಕತಂಗೆರಹಾಳ ಗ್ರಾಮ ಸುಮಾರು 1 ಕಿ.ಮೀ ಗಿಂತ ಕಡಿಮೆ ಆಗುತ್ತದೆ. ನಾವು ನೇಸರಗಿ ಮಾರ್ಗವಾಗಿ ಹೋದೆವು ಎಂದರೆ ಸರಿ. ಪ್ರಾರಂಭದಲ್ಲಿ ಅಕ್ಕತಂಗೆರಹಾಳ ಕ್ರಾಸ ನಂತರ ಜನತಾ ಪ್ಲಾಟ ನಂತರ ದಾವಲತ್ತಿ ನಂತರ ಗಡಾ ಕ್ರಾಸ ನಂತರ ಪಂಜಾನಟ್ಟಿ ಗ್ರಾಮ ಬರುತ್ತವೆ ಎಂದರೆ ಸರಿ. ಅಕ್ಕತಂಗೆರಹಾಳ ಕ್ರಾಸದಿಂದ ಪಂಜಾನಟ್ಟಿ ಗ್ರಾಮ 3 ರಿಂದ 4 ಕಿ.ಮೀ ಆಗಬಹುದು. ಅದೇ ರೀತಿ ಗೋಕಾಕದಿಂದ ಅಕ್ಕತಂಗೆರಹಾಳ ಕ್ರಾಸ 30 ಕಿ.ಮೀ ಆಗುತ್ತದೆ. ಪಂಜಾನಟ್ಟಿ ಶಾಲೆಯಲ್ಲಿ ಗುಡ್ಡಇದೆ ಎಂದರೆ ಸರಿ. ಶಾಲೆ ಹಿಂದೆ ಹಳ್ಳ ಇದೆ ಎಂದರೆ ಸರಿಯಲ್ಲ. ಹಳ್ಳ ಇದೆ ಎಂದರೆ ಅದು ದೂರ ಇದೆ ಎಂದು ಹೇಳುತ್ತಾರೆ. ಶಾಲೆಯ ಹತ್ತಿರ ಯಾವುದೇ ವಸತಿ ಮನೆಗಳು ಇಲ್ಲ ಎಂದರೆ ಸರಿ. ಪಂಜಾನಟ್ಟಿ ಗ್ರಾಮದಲ್ಲಿ ವಸತಿ ಮನೆಗಳು ಪಶ್ಚಿಮ ಮುಖವಾಗಿವೆ ಎಂದರೆ ಸರಿ. ಶಾಲೆಯ ಮುಂದುಗಡೆ 2 ಅಂಗಡಿಗಳು ಇವೆ ಎಂದರೆ ಸಾಕ್ಷಿಯು ಒಂದು ಹೊಟೇಲ , 1 ಕಿರಾಣಿ ಅಂಗಡಿ ಇದೆ ಎಂದಿರುತ್ತಾರೆ. ಸಾಮಾನ್ಯವಾಗಿ ಗ್ರಾಮ್ಥರು ಅವೇ ಅಂಗಡಿಗಳಿಗ ಚಾ ಕುಡಿಯಲು ಮತ್ತು ಕಿರಾಣಿ ತೆಗೆದುಕೊಳ್ಳಲು ಬರುತ್ತಾರೆ ಎಂದರೆ ಸರಿ. ಸಾಕ್ಷಿಯುಮುಂದುವರೆದ ರಾತ್ರಿ ಸಮಯ ಆಗಿದ್ದರಿಂದ ಯಾರು ಇರಲಿಲ್ಲ ಎಂದು ನುಡಿದಿರುತ್ತಾರೆ. ಚಾಸಾ-1 ಮತ್ತು 2 ರಾಜನಕಟ್ಟಿ ಗ್ರಾಮದವರು ಎಂದರೆ ಸರಿ. ರಾಜನಕಟ್ಟಿ ಗೆ ಹೋಗಲು ಬಸ ನಿಲ್ದಾಣ ಅದೇ ಶಾಲೆ ಮತ್ತು ಹೊಟೇಲ ಮಧ್ಯ ಇದೇ ಎಂದರೆ ಸಾಕ್ಷಿಯು ಶಾಲೆಯಿಂದ ದೂರಾ ಇದೆ ಎಂದು ಹೇಳುತ್ತಾರೆ. ಲಕ್ಷ್ಮೀ ಗುಡಿ ಹತ್ತಿರ ಇದೆ ಎಂದು ಹೇಳುತ್ತಾರೆ. ಅಕ್ಕತಂಗಿರಹಾಳ-ನೇಸರಗಿ ರಸ್ತೆ ದಕ್ಷಿಣ-ಉತ್ತರವಾಗಿ ಇದೆ ಎಂದರೆ ಸರಿ. ಲಕ್ಷೀ ಗುಡಿ ಪಶ್ಚಿಮದ ಕಡೆಗೆ ಇದೆ ಎಂದರೆ ಸರಿ. ಅಂಕಲಗಿಯಿಂದ ರಾಜನಕಟ್ಟಿಗೆ ಹೋಗುವವರು ಶಾಲೆಯ ಪೂರ್ವದ ಕಡೆ ಇಳಿದುಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಅಂಕಲಗಿಯಿಂದ ಪಂಜಾನಟ್ಟಿಗೆ ಹೋಗಲು ದಕ್ಷಿಣ-ಉತ್ತರವಾಗಿ ಹೋಗಬೇಕು ಎಂದರೆ ಸಾಕ್ಷಿಯು ಉತ್ತರ-ದಕ್ಷಿಣ ಹೋಗುತ್ತದ್ದೆ ಎಂದು ಹೇಳುತ್ತಾರೆ.

ಘಟನಾ ಸ್ಥಳದಲ್ಲಿ 08.15 ರಿಂದ ರಸ್ತೆಗಾವಲು ಮಾಡಲು ಪ್ರಾರಂಭಿಸಿದ್ದೇವು. ನಮ್ಮ ಜೀಪನ್ನು ಸರಕಾರಿ ಶಾಲೆಯ ಹಿಂದೆ ನಿಲ್ಲಿಸಿದೆವು. ಅದರ ಪೂರ್ವಕ್ಕೆ ಸರಕಾರಿ ಶಾಲೆ, ಪಶ್ಚಿಮಕ್ಕೆ ಪಂಜಾನಟ್ಟಿ ಗ್ರಾಮ , ದಕ್ಷಿಣಕ್ಕೆ ನೇಸರಗಿಗೆ ಹೋಗುವ ರಸ್ತೆ ಮತ್ತು ಉತ್ತರಕ್ಕೆ ಅಕ್ಕತಂಗೆರಹಾಳಗೆ ಹೋಗುವ ರಸ್ತೆ. ನಾವು ಅಲ್ಲಿ 08.15 ರಿಂದ 08.30 ರವರೆಗೆ ವಾಚ ಮಾಡಿದೇವು. ಆ ಸಮಯದಲ್ಲಿ ಅಕ್ಕತಂಗೆರಹಾಳದಿಂದ ಒಬ್ಬರು ಮೋಟರ ಸೈಕಲ ಮೇಲೆ ಬಂದರು. ಅವನು ನಮ್ಮನ್ನು ನೋಡಿ ಗಾಡಿ ಮೇಲೆ ಜೋರಾಗಿ ಓಡಲು ಪ್ರಯತ್ನಿಸಿದನು. ನಾವು ಅವನನ್ನು ಹಿಡಿದಿರುತ್ತೇವೆ. ಸದರಿ ಗಾಡಿಯ ಮಾಲಕರು ಯಾರು ಎಂದು ನಮ್ಮ ಮೇಲಧಿಕಾರಿ ಚಾಸಾ-3 ರವರು ವಿಚಾರಣೆ ಮಾಡಿರುತ್ತಾರೆ. ಜಪ್ತು ಮಾಡಿದ ಎಲ್ಲ ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಯಾವುದೇ

ಅಡಚಣೆ ಇಲ್ಲ ಎಂದರೆ ಸಾಕ್ಷಿಯು ಎಲ್ಲಾ ಮುದ್ದೆ ಮಾಲುಗಳನ್ನುಕಳುಹಿಸಲು ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ಅಲ್ಲಿ ಗಾಡಿ ಮತ್ತು ವಿಸ್ಕಿ ತುಂಬಿದ ಚೀಲಗಳನ್ನು ಜಪ್ತು ಪಡಿಸಿಕೊಂಡಿರುತ್ತೇವೆ. ಇಷ್ಟೇಲ ಮಾಡಲು ರಾತ್ರಿ 10.00 ಆಯಿತು ಎಂದರೆ ಸಾಕ್ಷಿಯು 09.45 ಗಂಟೆ ಆಯಿತು ಎಂದು ಹೇಳುತ್ತಾರೆ.

ನಾನು ಮತ್ತು ಚಾಸಾ-3 ಹಾಗೂ ಉಳಿದ ಸಿಬ್ಬಂದಿಯೊಂದಿಗೆ ಹೋಗಿ ಘಟನಾ ಸ್ಥಳದಲ್ಲಿ ದಾಳಿ ಮಾಡಿಲ್ಲ, ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಲ್ಲ, ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಜಪ್ತಾದ ಮಾಲುಗಳು ಆರೋಪಿತನಿಗೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿರುವ ಮಾಲುಗಳನ್ನು ವಿಲೇವಾರಿ ಮಾಡಲು ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.